ವಿಜಯ ಕರ್ನಾಟಕ

Thursday, February 4th, 2010

# ಅಭಿನಯ ಏಕ ವ್ಯಕ್ತಿ ರಾಷ್ಟ್ರೀಯ ಉತ್ಸವ

▪ **ವಿಕ ಸುದ್ದಿಲೋಕ** ಬೆಂಗಳೂರು

ಜೈನ್ ವಿವಿಯು (ಸಿಎಂಎಸ್ ವಿಭಾಗ ) 'ಅಭಿನಯ' ಹೆಸರಿನಲ್ಲಿ ಏಕ ವ್ಯಕ್ತಿ ರಾಷ್ಟ್ರೀಯ ಉತ್ಸವ -2010 ನಗರದ ಜಯನಗರದ 8ನೇ ಬ್ಲಾಕ್‌ನಲ್ಲಿರುವ ಜೆ.ಎಸ್.ಎಸ್. ಸಭಾಂಗಣದಲ್ಲಿ ಹಮ್ಮಿಕೊಂಡಿದೆ.

ಉತ್ಸವ ಪೂರ್ವಭಾವಿಯಾಗಿ ಫೆ.4 ರಂದು ತಾಜ್ ಮಹಲ್ ಕಾ ಟೆಂಡರ್ (ಹಿಂದಿ), ಫೆ.5 ರಂದು ಆಲ್ಸ್ ವೆಲ್ (ಇಂಗ್ಲಿಷ್) ಹಾಗೂ ಫೆ.6 ರಂದು ಲಂಚಾವತಾರ (ಕನ್ನಡ) ನಾಟಕಗಳು ಪ್ರದರ್ಶನಗೊಳ್ಳಲಿವೆ. ಮೂರೂ ದಿನ ಸಮಯ ಸಂಜೆ 5 ಕ್ಕೆ. ಅಂತಿಮ ದಿನದ ಸ್ಪರ್ಧೆ ಫೆ.7 ರಂದು ನಡೆಯಲಿದೆ. ಅಂದು ಬೆಳಗ್ಗೆ 9 ರಿಂದ ಸಂಜೆ 7 ರವರೆಗೆ ಕನ್ನಡ, ಹಿಂದಿ ಹಾಗೂ ಇಂಗ್ಲಿಷ್ ಭಾಷೆಯ ತಲಾ ಮೂರು ನಾಟಕಗಳು ಪ್ರದರ್ಶನಗೊಳ್ಳಲಿವೆ.